## ಅಚ್ಯುತನ್ ಪ್ರಧಾನ ಕೃತಿಗಳು

ಇರುಪತಾಂ ನೂಟ್ಟಾಂಡಿಂಡೆ ಇತಿಹಾಸಂ, ಇಡಿಞುಪೊಳಿಞ ಲೋಕಂ, ಒರು ಕುಲ ಮುಂದಿರಿಂಜ, ಒರು ಕುಡನ್ನ ನಿಲಾವ್, ವೀರವಾದಂ, ವಳಕಿಲ್ಲುಕ್ಕಂ, ಮನಸಾಕ್ಷಿಯುಡೆ ಪೂಕ್ಕಳ್, ಮಧುವಿಧು, ಅರಂಙೇಟ್ಟಂ, ಮನೋರಥಂ, ವೆಣ್ಣಕ್ಕಲ್ಲಿಂಡೆ ಕಥಾ, ಕಡಂಬಿನ್ ಪೂಕ್ಕಳ್, ಸಂಚಾರಿಗಳ್, ಮಾನಸಪೂಜ, ಬಲಿದರ್ಶನಂ, ಕುದಿರ್ನ ಮಣ್ಣ್, ಧರ್ಮ ಸೂರ್ಯನ್, ದೇಶಸೇವಿಕಾ (ಗ್ರಂಥಕಾವ್ಯ), ಈ ಏಟ್ಟತ್ತಿ ನುಣಯೇ ಪರಯು (ನಾಟಕ), ಅವತಾಳಂಜಳ್, ಕಾಕ್ಕಪುಳ್ಳಿಗಳ್ (ಕಿರುಕಥೆಗಳ ಸಂಗ್ರಹ), ಉಪನಯನಂ, ಹೃದಯತ್ತಿಲೇಕ್ ನೋಕಿ ಎಳುತು, ಕವಿತೆಯಿಲೆ ವೃತ್ತವುಂ ಚತುರವುಂ, ಪೊನ್ನಾನಿಕ್ಕಡಲ್ (ಲೇಖನ ಸಂಗ್ರಹ) ಸಾಗರ ಸಂಗೀತ, ನಾಡೋಡಿ ತೆಲುಂಗುಕಥಾ.

### ಅಕ್ಕಿತ್ತಂ ಸಾಹಿತ್ಯ ಪಯಣ

ಮಲಯಾಳಂ ಸಾಹಿತ್ಯದಲ್ಲಿ ಆಧುನಿಕತೆಗೆ ತೆರೆದುಕೊಂಡ ಕವಿಗಳಲ್ಲಿ ಒಬ್ಬರಾಗಿದ್ದಾರೆ ಅಕ್ಕಿತ್ತಂ. ಪುರಾತನ ಕಾಲದ ಚೌಕಟ್ಟುಗಳಿಂದಾಚೆಗೆ ಬಂದು ಆಧುನಿಕತೆಗೆ ಪ್ರಸ್ತುತ ಕಾಲದ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಕಾವ್ಯ ರಚಿಸಿದವರು ಅಕ್ಕಿತ್ತಂ. 'ಇರುಪತಾಂ ನೂಟ್ಟಾಂಡಿಂಡೆ ಇತಿಹಾಸಂ' ಎಂಬ ಅವರ ಮೊದಲ ಕವನಸಂಕಲನ ಚರ್ಚೆಗೆ ಕಾರಣವಾಗಿತ್ತು. ದೇಶೀಯ ಸಂಘಟನೆ ಮತ್ತು ನವೋತ್ಥಾನದ ಬೆಂಕಿಯಲ್ಲಿ ಉದಿಸಿದ ತಲೆಮಾರಿನ ಪ್ರತಿನಿಧಿಯಾಗಿದ್ದರು. ಸಮಾಜವಾದಿ ಆಶಯಗಳೊಂದಿಗೆ ನಂಬೂದಿರಿ ನವೋತ್ಥಾನ ಸಂಘಟನೆಗಳಲ್ಲಿಯೂ ಆಸಕ್ತಿಹೊಂದಿ ಸಾಮಾಜಿಕ ಕೆಲಸಗಳಲ್ಲಿ ತೊಡಗಿದ ಅವರು ಜನರ ನೋವಿಗೆ ಸ್ಪಂದಿಸುತ್ತಿದ್ದರು. ಮನುಷ್ಯನ ನೋವಿಗೆ ಮರುಗುವ ಅವರ ಕವನಗಳಲ್ಲಿ ಸ್ನೇಹದ ಲೇಪನವಿರುತ್ತಿತ್ತು. ಕಾವ್ಯದ ಮೂಲಕ ಅವರು ಜನರ ನೋವನ್ನು ಮರೆಸಲು ಯತ್ನಿಸುತ್ತಿದ್ದರು.

ಮನುಷ್ಯರ ಬಗ್ಗೆ ಮಾತ್ರವಲ್ಲ, ಭೂಮಿಯಲ್ಲಿರುವ ಸಕಲ ಜೀವಚರಾಚರಗಳ ಬಗ್ಗೆ ಅಕ್ಕಿತ್ತಂ ಅವರದು ಮಿಡಿಯುವ ಮನಸ್ಸು. ಜನರು ಪ್ರಕೃತಿಯ ಮೇಲೆಸಗುವ ದೌರ್ಜನ್ಯಗಳ ಬಗ್ಗೆ ಅವರಿಗೆ ಅಪಾರ ನೋವು. ಪ್ರಾಣಿ ಪಕ್ಷಿಗಳು ಅನುಭವಿಸುವ ನೋವು ತನ್ನದೇ ಎಂಬಂತೆ ಮರುಗುವ ಕವಿ ಅಕ್ಕಿತಂ.

ಗಾಢ ಚಿಂತನೆ ಮತ್ತು ಪ್ರಕೃತಿ–ಮಾನವೀಯತೆಗೆ ಸ್ಪಂದಿಸುವ ರೀತಿ ಅಕ್ಕಿತ್ತಂ ಅವರನ್ನು ಎಲ್ಲರ ಮೆಚ್ಚಿನ ಕವಿಯನ್ನಾಗಿಸಿದೆ. ಕವಿತೆ, ಕತೆ, ನಾಟಕ, ಲೇಖನ ಮಾತ್ರವಲ್ಲದೆ ಅನುವಾದ ಕೃತಿಗಳ ಮೂಲಕವೂ ಅಕ್ಕಿತ್ತಂ ಸಾಹಿತ್ಯಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕೇರಳ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಓಡಕ್ಕುಳಲ್, ಆಶಾನ್, ವಳ್ಳತ್ತೋಳ್ , ಜ್ಞಾನಪ್ಪಾನ ಪುರಸ್ಕಾರ, ಪದ್ಮಶ್ರೀ, ಎಳುತ್ತಚ್ಚನ್ ಪ್ರಶಸ್ತಿ, ಈಗ ಬಂದಿರುವ ಜ್ಞಾನಪೀಠ ಅವರಿಗೆ ಲಭಿಸಿದ ಪುರಸ್ಕಾರಗಳಾಗಿವೆ.